**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.</u>**

**<u>ಓ.ಎಸ್. ನಂಃ227/2015</u>**

**ಪಿ.ಡಬ್ಲ್ಯೂಃ 02**

ಸಾಕ್ಷಿಯನ್ನು ಇಂದು ದಿನಾಂಕಃ **10.06.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲುಃ** ಪ್ರತಿವಾದಿ ಪರ ಶ್ರೀ **ಎ.ಪಿ.ಎಸ್** ವಕೀಲರಿಂದಃ

ನಿಪಿ-**7** ದಾಖಲೆಯನ್ನು ನಾನು ದಾವಾ ಆಸ್ತಿ ಪಕ್ಕದ ಸರ್ವೇ ನಂ.**163** ಮತ್ತು **172** ಜಮೀನಿನ ಮಾಲೀಕರು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಯು ಸುಳ್ಳು ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ನಿಪಿ-**9** ರಂತೆ ದಾವಾ **3** ನೇ ಆಸ್ತಿಯ ಪಕ್ಕದ ಜಮೀನಿನ ಸರ್ವೇ ನಂ.**136** ರವರ ಮಾಲೀಕರು **8** ಗುಂಟೆ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಎಂದು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಯು ಸುಳ್ಳು ದಾಖಲೆ ಆಗಿರುತ್ತದೆ ಎಂದರೆ ಸರಿ.

**1** ನೇ ಪ್ರತಿವಾದಿ ನನ್ನ ದೊಡ್ಡಮ್ಮ ಎಂದರೆ ಸರಿ. **1** ನೇ ಪ್ರತಿವಾದಿಯು ನನ್ನ, ನನ್ನ ತಂದೆ, ಗುರುಸ್ವಾಮಿ ಮತ್ತು ನನ್ನ ಸಹೋದರ ರಮೇಶರವರ ವಿರುದ್ಧ ಓ.ಎಸ್ ನಂ.**5/2003** ರಂತೆ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಆಸ್ತಿ ವಿಭಾಗಕ್ಕಾಗಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ವಿಭಾಗಕ್ಕಾಗಿ ಡಿಕ್ರಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆ ತೀರ್ಪಿನ ನಂತರ **1** ನೇ ಪ್ರತಿವಾದಿ ಎಫ್.ಡಿ.ಪಿ ನಂ.**1/2012** ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ **1** ನೇ ಪ್ರತಿವಾದಿಯು ಇ.ಪಿ ನಂ. **8/2014** ರಂತೆ ಸದರಿ ಡಿಕ್ರಿಯಂತೆ ದಾವಾ ಆಸ್ತಿಗಳ ಅರ್ಧ ಭಾಗವನ್ನು ನ್ಯಾಯಾಲಯದ ಮುಖಾಂತರ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಾಲಯದ ಅಮಿನರು ನ್ಯಾಯಾಲಯದ ಡಿಕ್ರಿಯಂತೆ ಸರ್ವೇ ನಂತರ ದಾವಾ ಆಸ್ತಿಗಳ ಅರ್ಧ ಭಾಗ ಸ್ವಾಧೀನವನ್ನು **1** ನೇ ಪ್ರತಿವಾದಿಯವರಿಗೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆದೇಶ ಮತ್ತು ಡಿಕ್ರಿಯ ವಿರುದ್ಧ ನಾನಗಲೀ ಅಥವಾ ನನ್ನ ತಂದೆಯಾಗಲೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ

ಪ್ರಕರಣಗಳಲ್ಲಿ ಭಾಗಿಯಾಗಿದ್ದು, ಎಲ್ಲಾ ವಿಚಾರಗಳನ್ನು ತಿಳಿದುಕೊಂಡಿದ್ದರೂ ಸಹ ನಾನು ಈ ಪ್ರಕರಣವನ್ನು ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ ನನ್ನ ಮತ್ತು 1ನೇ ಪ್ರತಿವಾದಿಯ ಪರವಾಗಿ ಎಫ್.ಡಿ.ಪಿ ಪ್ರಕರಣ ಚಾಲ್ತಿಯಲ್ಲಿರುವಾಗ ಮಾಡಿಕೊಟ್ಟಿರುವ ದಿನಾಂಕ **21.12.2012** ಹಕ್ಕು ನಿವೃತ್ತಿ ಪತ್ರ ಖೊಟ್ಟಿ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು 1ನೇ ಪ್ರತಿವಾದಿಗೆ ಸೇರಿದ ಆಸ್ತಿಯನ್ನು ಲಪಟಾಯಿಸಲು ಹಾಗೂ ಅವರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಸಲ್ಲಿಸಿರುವ ಪಹಣಿ ಪತ್ರಿಕೆಗಳು ಖೊಟ್ಟಿ ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ ತಿ.ನರಸೀಪುರ.**